International Journal of Leading Research Publication (IJLRP)

E-ISSN: 2582-8010 ● Website: www.ijlrp.com ● Email: editor@ijlrp.com

# ವಚನಗಳಲ್ಲಿ ಕಾಯಕ ಮತ್ತು ದಾಸೋಹದ ಒಳನೋಟಗಳು

**ಡಾ. ಬಿ. ರೇವಣ್ಣ**

ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಸ್.ಜೆ.ಎಂ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಂದ್ರವಳ್ಳಿ,
ಚಿತ್ರದುರ್ಗ, ಕರ್ನಾಟಕ, ಭಾರತ.
ಮಿಂಚಚೆ: revannab12@gmail.com

**ಸಾರಾಂಶ:**

ಹನ್ನೆರಡನೇ ಶತಮಾನ ಭಾರತೀಯ ಹಾಗೂ ಕರ್ನಾಟಕ ಇತಿಹಾಸದಲ್ಲಿ ಬಹುಮುಖ್ಯ ಕಾಲಘಟ್ಟ. ಆ ಕಾಲದ ಶಿವಶರಣರು ಜೀವನದ ಹೊಸ ಮೌಲ್ಯಗಳನ್ನು ಎತ್ತಿ ಹಿಡಿದು, ವರ್ಣಾಶ್ರಮ ಧರ್ಮಗಳ ಹಂಗನ್ನು ಕಿತ್ತು ಬಿಸುಟು ಸಮತಾ ತತ್ವದ ತಳಹದಿಯ ಮೇಲೆ ಹೊಸ ಸಮಾಜವನ್ನು ನಿರ್ಮಿಸಲು ಹೆಣಗಿದರು. ಅಂದಿನ ಕಾಲದ ಜನತೆಗೆ ತಿಳುವಳಿಕೆ ನೀಡಲು ಸರಳ, ಸಹಜ ಮತ್ತು ಜನಸಾಮನ್ಯರಿಗೆ ಅರ್ಥವಾಗುವ ಭಾಷೆಯನ್ನು ಬಳಸಿದರು. ಜಿವನದ ಮೌಲ್ಯಗಳನ್ನು ನವಶೈಲಿಯಲ್ಲಿ ನಿರೂಪಿಸಿದರು. ಈ ರೀತಿ ನಿರೂಪಿಸಿದ ಭಕ್ತಿ ಭಾವಾವೇಶ ಪೂರ್ಣ ಅನಿಸಿಕೆಗಳನ್ನು 'ವಚನ' ಎನ್ನಲಾಯಿತು. ವಚನ ಶಬ್ದಕ್ಕೆ ಅರ್ಥ-ಪ್ರತಿಜ್ಞೆ. ಆತ್ಮಶಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೆ ಇರಲಿ, ನುಡಿ ಮಾತ್ರ ಕಲಾತ್ಮಕವಾದುದ್ದು, ರಚನೆ ಎಂದರೆ, ನುಡಿದಂತೆ ಆತ್ಮಸಾಕ್ಷಿಯ ವಾಣಿ ವಚನವೆನ್ನಿಸುತ್ತದೆ. ವಚನಗಳು ಪಂಡಿತ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಪಂಡಿತರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ - ಹೃದಯಕ್ಕೆ ಮುಟ್ಟುವಂತೆ ಬಿಡಿ ಮಾತುಗಳ ಮೂಲಕ ಹೇಳುತ್ತಾರೆ. ಶರಣರು ಬಿಡಿ ಮಾತುಗಳಂತೆ ಪೋಣಿಸಿ ವಚನಗಳನ್ನು ಸಂಗ್ರಹಿಸುವುದು ಅಷ್ಟೇ ಮುಖ್ಯವಾಗಿತ್ತು. ಈ ಶತಮಾನದ (೧೨ನೇ ಶತಮಾನ) ಕನ್ನಡ ವಚನ ಸಾಹಿತ್ಯದಲ್ಲಿ ಬರುವ ಕಾಯಕ (ಶ್ರಮದ ಘನತೆ) ಮತ್ತು ದಾಸೋಹ (ನಿಸ್ವಾರ್ಥ ಹಂಚಿಕೆ) ಕುರಿತಾದ ಸಾಹಿತ್ಯವು ಬಸವಣ್ಣ ಮತ್ತು ಶರಣರು ಪ್ರತಿಪಾದಿಸಿದ ಆಳವಾದ ಸಾಮಾಜಿಕ-ಆರ್ಥಿಕ ಮತ್ತು ಆಧ್ಯಾತ್ಮಿಕ ತತ್ವಶಾಸ್ತ್ರವನ್ನು ಬಹಿರಂಗಪಡಿಸುತ್ತದೆ. ವಿದ್ವತ್ಪೂರ್ಣ ವಿಮರ್ಶೆಗಳು ಈ ಪರಿಕಲ್ಪನೆಗಳನ್ನು ಜಾತಿ ಆಧಾರಿತ ತಾರತಮ್ಯವನ್ನು ತೊಡೆದುಹಾಕಲು, ಆರ್ಥಿಕ ಸ್ವಾವಲಂಬನೆಯನ್ನು ಉತ್ತೇಜಿಸಲು ಮತ್ತು ಸಹಾನುಭೂತಿ ಮತ್ತು ಹಂಚಿಕೆಯ ಜವಾಬ್ದಾರಿಯ ಮೇಲೆ ಕೇಂದ್ರೀಕೃತವಾದ ಸಮುದಾಯವನ್ನು ಬೆಳೆಸಲು ವಿನ್ಯಾಸಗೊಳಿಸಲಾದ ಸಮಾನತಾವಾದಿ ಚಳುವಳಿಯ ಮೂಲಾಧಾರವೆಂದು ಈ ಲೇಖನ ವಿವರಿಸುತ್ತವೆ.

**ಪ್ರಮುಖ ಪದಗಳು**: ವಚನ ಸಾಹಿತ್ಯ, ಭಕ್ತಿ ಸಾಹಿತ್ಯ. ಪಂಡಿತರು, ಶಿವಶರಣರು ಜೀವನ, ಕಾಯಕ ಮತ್ತು ದಾಸೋಹದ ಪರಿಕಲ್ಪನೆ

## ಪ್ರಸ್ತಾವನೆ:

ವಚನ ಸಾಹಿತ್ಯವು ರೂಪ ಮತ್ತು ಸತ್ವಗಳ ದೃಷ್ಟಿಯಿಂದ ಅತ್ಯಂತ ಅಪೂರ್ವ ಸೃಷ್ಟಿಯಾಗಿದೆ. ವಚನಗಳು ಶಾಸ್ತ್ರ ಮತ್ತು ಸಾಹಿತ್ಯ ಎರಡೂ ಆಗಿದೆ. ಬಸವಣ್ಣ ತಮ್ಮ ವಚನವೊಂದರಲ್ಲಿ ಹೇಳಿರುವಂತೆ 'ಆನು ಹೊಲದಂತೆ ಹಾಡುವೆ' ಎಂಬ ಮಾತು ಬಹುಶಃ ಆಧುನಿಕ ವಚನಕಾರರಿಗೂ ಅನ್ವಯಿಸುವಂತೆ

ಕಂಡುಬರುತ್ತದೆ. ವಚನಗಳು ಅನೇಕ ವಿಶಿಷ್ಟಾಂಶಗಳಿಂದ ಕೂಡಿದ್ದು, ಹೊರ ನೋಟಕ್ಕೆ ಸುಲಭವಾಗಿ ಗುರುತಿಸಬಹುದಾದ ರಚನೆಗಳಾಗಿವೆ. ಈ ಹೊರ ನೋಟದ ಸಂಕ್ಷಿಪ್ತತೆ, ವಚನಗಳ ಕೊನೆಯಲ್ಲಿರುವ ಅಂಕಿತಗಳು, ನಿಯತ ಛಂದಸ್ಸಿಗೆ ಒಳಪಡದ ಸಾಲಗಳು ಎದ್ದು ಕಾಣುವ ಪ್ರಮುಖ ಅಂಶಗಳಾಗಿವೆ. ವಚನಗಳಲ್ಲಿ ಪ್ರತಿಯೊಂದೂ ಸ್ವತಂತ್ರ ರಚನೆಗಳಾಗಿವೆ. ವಚನಕಾರರು ತಮಗನಿಸಿದ ಭಾವನೆಯನ್ನು ಒಂದು ವಚನವಾಗಿ ರಚಿಸುವುದರಿಂದ ಪ್ರತಿ ವಚನವು ಒಂದೊಂದು  ಮುಕ್ತಕ. ಇಂತಹ ಮುಕ್ತಕ ರಚನೆಗಳು ಕನ್ನಡ ಸಾಹಿತ್ಯದಲ್ಲಿ ವಚನಗಳಿಗಿಂತ ಮೊದಲು ನಮಗೆ ತಿಳಿದಂತೆ ಇರಲಿಲ್ಲ. ವಚನಗಳು ಪದ್ಯ ಗ್ರಂಥಿಯಾದ ಗದ್ಯವಾಗಿರುವುದರಿಂದ ಕಟ್ಟುನಿಟ್ಟಿನ ಲೆಕ್ಕಾಚಾರದ ಬಂಧವಿಲ್ಲದಿದ್ದರೂ ಭಾವಕ್ಕೆ ಹೊಂದುವAತಹ ಲಯ ಅವುಗಳಲ್ಲಿ ಕಂಡುಬರುತ್ತವೆ. ಅಂತ್ಯ ಪ್ರಾಸ ಮತ್ತು ತರ್ಕಬದ್ಧ ರಚನಾ ಕ್ರಮದಿಂದ ವಚನಗಳು ಗಮನಸೆಳೆಯುತ್ತವೆ. ಹೇಳಬೇಕೆಂದಿರುವ ಭಾವವನ್ನು ಸಮರ್ಥವಾಗಿ, ಪರಿಣಾಮಕಾರಿಯಾಗಿ ಹೇಳಲು ಕನ್ನಡ ಭಾಷೆಯನ್ನು ವಚನಕಾರರು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ವಚನಕಾರರನ್ನು ಕುರಿತಂತೆ ಡಾ. ಎಂ. ಚಿದಾನಂದಮೂರ್ತಿಯವರು ಹೇಳಿದಂತೆ 'ವಚನಕಾರರು ಕವಿಗಳಲ್ಲ, ಅವರು ಬರೆದದ್ದು ಕಾವ್ಯವಲ್ಲ' ಅವರ ಶ್ರೋತೃ ವರ್ಗವು ಕಾವ್ಯ ಸ್ವಾದನ ಮಾಡುವ ಪಂಡಿತ ವರ್ಗವಲ್ಲ. ಅವರು ಮುಖ್ಯವಾಗಿ ಸಾಮಾಜಿಕ ಪ್ರಜ್ಞೆವುಳ್ಳ ನೀತಿ ಬೋಧಕರು, ಸಮಾಜದ ವಿಮರ್ಶಕರು; ತಮ್ಮ ಅನುಭಾವವನ್ನು ಜನತೆಯ ಜೊತೆ ಹಂಚಿಕೊಳ್ಳಲು ಬಯಸಿದವರು. ಅವರು ಶ್ರೋತೃ ವರ್ಗ ಮುಖ್ಯವಾಗಿ ಸಾಮಾನ್ಯ ಜನತೆ ಒಂದು ನೀತಿಯನ್ನು, ಅನಿಸಿಕೆಯನ್ನು ಪರಿಣಾಮಕಾರಿಯಾಗಿ ಹೇಳುವುದು, ತನ್ಮೂಲಕ ಅಸಾಮಾನ್ಯರ ಮನಸ್ಸನ್ನು ಅದು ಮುಟ್ಟಿ, ಅಲ್ಲಿ ಉಳಿಯುವಂತಾಗಬೇಕೆಂಬುವುದು ಕೃತಿಕಾರರ ಮುಖ್ಯ ಉದ್ದೇಶವಾಗಿರುತ್ತದೆ. ಈ ಎಲ್ಲಾ ಅಂಶಗಳಿಂದಾಗಿ ವಚನಗಳ ಸ್ವರೂಪವನ್ನು ಕುರಿತು ಎಂ. ಆರ್. ಶ್ರೀ ನಿವಾಸಮೂತಿಯವರು ಹೇಳಿರುವ ಮಾತುಗಳು ಗಮನಾರ್ಹವಾಗಿವೆ. "ವಚನಗಳು ತಂದದ್ದಲ್ಲ. ಕನ್ನಡದ ಸ್ವಯಾರ್ಜಿತ ಸ್ವತ್ತು"ಎಂಬ ಬಹು ಜನಮನ್ನಣೆ ಪಡೆದ ನಿಲುವಿಗೆ ನಾವು ಕೂಡ ಸಹಮತ ಸೂಚಿಸಬೇಕಾಗುತ್ತದೆ. ವಚನಗಳ ರಚನೆಯಲ್ಲಿ ಮತ್ತು ವೈವಿದ್ಯತೆಯಲ್ಲಿ, ಅವು ಒಳಗೊಂಡ ವಿಚಾರಗಳಲ್ಲೂ ವಿಭಿನ್ನತೆ ಇರುವುದು ಕಂಡುಬರುತ್ತದೆ. ಹಾಗೆಯೆ ಸಮಾಜದ ವಿಡಂಬನೆ, ಖಂಡನೆ, ಉಪದೇಶಗಳ ಜೊತೆಗೆ ವಚನಕಾರನ ಉದ್ವೇಗ, ಸಂಘರ್ಷ, ಅನುನಯ ಮೊದಲಾದ ಭಾವನೆಗಳನ್ನು ಕೂಡ ವಚನಗಳ ಒಳಗೊಂಡಿವೆ.

ಇಂತಹ ವಚನಗಳು ಅಂದಿನ ಸಮಾಜದ ಧಾರ್ಮಿಕ-ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿ ಮೂಲವಾಗಿ ಬಂದಿದ್ದ ಅನೇಕ ಮೌಢ್ಯಗಳನ್ನು, ಆಚರಣೆ-ನಂಬಿಕೆಗಳನ್ನು ಬದಲಾಯಿಸಲು ಪ್ರಯತ್ನಿಸಿದರು. ಅವರ ಕಾರ್ಯಸಾಧನೆಗಳಿಗೆ ಬಳಸಿಕೊಂಡ ಅನೇಕ ಸಾಧನೆಗಳಲ್ಲಿ 'ಕಾಯಕ ಮತ್ತು ದಾಸೋಹದ ಪರಿಕಲ್ಪನೆ' ಬಹುದೊಡ್ಡ ಕೊಡುಗೆಗಳು. ಇಂತಹ ಮಹತ್ವಪೂರ್ಣವಾದ ವಿಷಯಗಳನ್ನು ಅನೇಕ ವಚನಕಾರರ ವಚನಗಳ ಮೂಲಕ ತಾತ್ವಿಕವಾಗಿ ಚರ್ಚಿಸಿ ಈ ಪ್ರಬಂಧದಲ್ಲಿ ಮಂಡಿಸಲು ಪ್ರಯತ್ನಿಸಲಾಗಿದೆ.

ಶಿವಶರಣರು ಮಾನವ ಸಮಾಜಕ್ಕೆ ನೀಡಿದ ಬಹುದೊಡ್ಡ ಕೊಡುಗೆಗಳೆಂದರೆ, 'ಕಾಯಕ ಮತ್ತು ದಾಸೋಹ ತತ್ವಗಳು ವ್ಯಕ್ತಿಯ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥರಿ೯ಯಕ್ಕೆ ಕಾರಣವಾಗುವ 'ಕಾಯಕ'ದಿಂದ ವ್ಯಕಿಯಾದವನು ಸಮಾಜದಲ್ಲಿ ಸ್ವಾವಲಂಬಿಯಾಗಿ, ಸ್ವಾಭಿಮಾನಿಯಾಗಿ ಬದುಕಲು ಸಾಧ್ಯ. ಉನ್ನತಿ, ಗೌರವ, ಸಮಾನತೆ, ಸ್ವಾತಂತ್ರರಿ೯ಯ ಇವೆಲ್ಲಾ ವ್ಯಕ್ತಿಯಾದವನಿಗೆ 'ಕಾಯಕ'ದಿಂದ ದೊರಕುತ್ತವೆ. 'ಕಾಯಕ ' ಪರಿಪೂರ್ಣವಾಗುವುದು 'ದಾಸೋಹ'ದಲ್ಲಿ ಕೊನೆಗೊಂಡಾಗ. ಇವು ಪರಸ್ಪರಾವಲಂಭಿಗಳು; ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಶರಣರ ಪ್ರಕಾರ 'ಗಳಿಕೆ' ಮತ್ತು 'ವಿನಿಯೋಗ' ಒಂದಕ್ಕೊಂದು ಪೂರಕ. ಸತ್ಯಶುದ್ಧ 'ಕಾಯಕ'ದಿಂದ ಗಳಿಸಿದ ಸಂಪತ್ತನ್ನು 'ದಾಸೋಹ' ರಪದಲ್ಲಿ ಸಮಾಜಕ್ಕೆ ನೀಡಬೇಕು. ಕಾಯಕ ಮತ್ತು ದಾಸೋಹದಿಂದ ಆತ್ಮೋದ್ದಾರ ಮತ್ತು ಸಮಜೋದ್ದಾರ ಸಾಧ್ಯವಾಗುತ್ತದೆ. ವ್ಯಕ್ತಿಯ ವೈಯಕ್ತಿಕ ಉದ್ದಾರ ಸಾಮಾಜಿಕ ಉದ್ದಾರದ ಮೂಲವಿರುವುದು ಕಾಯಕದಲ್ಲಿ ಎಂಬುದನ್ನು ಶರಣರು ಅರಿತಿದ್ದರು.

‘ಕಾಯ’ ಎಂದರೆ ಶರೀರ. ಅಂದರೆ ಶರೀರ ಶ್ರಮವನ್ನು ಬಳಸಿ ಮಾಡಿದ್ದು ಕಾಯಕ, ಉದ್ಯೋಗ, ಕೆಲಸ, ದುಡಿಮೆ ಎಂಬ ಪದಗಳು ‘ಕಾಯಕ’ಕ್ಕೆ ಪರ್ಯಾಯ ಪದಗಳು. ಅಲ್ಲಿ ‘ಕಾಯಕ’ ಪದ ಹೊಂದಿರುವ ಅರ್ಥ ಮಿಗಿಲಾದದ್ದು. ದುಡಿಮೆ ‘ಕಾಯಕ’ ಎನಿಸಿಕೊಳ್ಳುವುದು ಫಲವನ್ನು ಹಂಚಿ ತಿಂದಾಗ ಮಾತ್ರ. ಕಾಯಕ ಮತ್ತು ದಾಸೋಹ ಇವರು ಪ್ರತಿಪಾದಿಸಿದ ಮೌಲ್ಯಗಳು.

ಶರಣರ ಪ್ರಕಾರ ಕಾಯಕವೇ ಪೂಜೆ, ಕಾಯಕದಿಂದಲೇ ಕೈಲಾಸ. ಭಕ್ತನ ಮೊದಲ ಲಕ್ಷಣವೇ ಕಾಯಕ. ಈ ಕಾಯಕ ‘ಶಾರೀರಿಕ’ ಇಲ್ಲವೇ ‘ಬೌದ್ಧಿಕ’ ವಾಗಿರಬಹುದು. ಅದರಲ್ಲಿ ತಾರತಮ್ಯವಿಲ್ಲ. ಬಸವಾದಿ ಶರಣರು ಸಾಮಾಜಿಕ ಬದಲಾವಣೆಯನ್ನು ತರಲು ಹೊರಟಾಗ ಅವರಿಗೆ ಮೊದಲು ಎದುರುದಾರಾದ ಸಮಸ್ಯೆ ಎಂದರೆ ಸಮಾಜದಲ್ಲಿ ಅನಾದಿ ಕಾಲದಿಂದಲೂ ಬೇರು ಬಿಟ್ಟಿದ್ದ ಜಾತಿ ಹಾಗೂ ವರ್ಗ ಸಮಸ್ಯೆ. ಅವರು ಸಮಾಜಕ್ಕೆ ಅಂಟಿಕೊಂಡಿದ್ದ ವರ್ಗ ವ್ಯವಸ್ಥೆ ಎಂಬ ವ್ಯಾದಿಯನ್ನು ‘ಕಾಯಕ’ ಎಂಬ ಔಷಧಿಯ ಮೂಲಕ ನಿವಾರಿಸುವ ಪ್ರಯತ್ನ ನಡೆಸಿದರು.

ವ್ಯಕ್ತಿ ಮತ್ತು ಸಮುದಾಯಿಕ ಏಳ್ಗೆಗೆ ಮತ್ತು ಕ್ಷೇಮಕ್ಕೆ ಕಾಯಕವೊಂದೇ ಮಂತ್ರ. ಗುರು-ಲಿಂಗ-ಜಂಗಮರ ಸೇವೆಗಿಂತ ಕಾಯಕಕ್ಕೆ ವಚನಕಾರರು ವಿಶೇಷ ಮಹತ್ವ ನೀಡುತ್ತಾರೆ.

ಅನುಭಾವಿಗಳ ಅನುಭವ ಮಂಟಪದಲ್ಲಿ ನಡೆಯುತ್ತಿದ್ದುದು, ಶಾಸ್ತ್ರದಲ್ಲಿ ಹೇಳಿದ ಸಂಪ್ರದಾಯದ ಮಾತುಗಳ ಜಿಜ್ಞಾಸೆಯಲ್ಲ. ತಮ್ಮ ಸಾಧನೆಯ ಮಾರ್ಗದಲ್ಲಿ ತಲೆದೋರಿದ ಸಂದೇಹಗಳನ್ನು ಮೂಡಿದ ಸಮಸ್ಯೆಗಳನ್ನು ಅನುಭವವನ್ನೇ ಆಧಾರವಾಗಿಟ್ಟುಕೊಂಡು ಚರ್ಚಿಸುತ್ತಿದ್ದರು. ಒಮ್ಮೆ ಅನುಭವ ಮಂಟಪದಲ್ಲಿ ಕಾಯಕವನ್ನು ಕುರಿತು ಒಂದು ಸಮಸ್ಯೆ ಒಡಮೂಡುತ್ತದೆ. ಅದಕ್ಕೆ ಕಾರಣನಾದವನು ಆಯ್ದಕ್ಕಿ ಮಾರಯ್ಯ.ಆತ ಅನುಭವ ಮಂಟಪಕ್ಕೆ ಬಂದು ಅಗ್ರಪೀಠದಲ್ಲಿ ಮಂಡಿಸಿದ್ದ ಪ್ರಭುದೇವರನ್ನು ಕುರಿತು ಕೇಳುತ್ತಾನೆ. “ಕಾಯಕವೇ ಕೈಲಾಸ” ಎಂದು ಹೇಳಿರುವುದರಿಂದ ಗುರು-ಲಿಂಗ- ಜಂಗಮ ಈ ಮೊದಲಾದವುಗಳ ಹಂಗಾದರ ಏತಕ್ಕೆ?

ಕಾಯಕದಲ್ಲಿ ನಿರತನಾದರೆ
ಗುರುದರ್ಶನವಾದರೂ ಮರೆಯಬೇಕು
ಲಿಂಗ ಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಅರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತಾದರೂ ಕಾಯಕದೊಳಗೂ

ಎನ್ನುತ್ತಾನೆ, ಕಾಯಕವೊಂದರಿಂದಲೇ ಎಲ್ಲವೂ ಸಿದ್ಧಿಸುವ ಹಾಗಿದ್ದರೆ, ತ್ರಿವಧಿ ದಾಸೋಹಗಳ ತೊಡಕೇಕೆ? ಎಂಬುದು ಆತನ ಸಂದೇಹ ‘ಕಾಯಕ’ ಎಂಬ ಮಾತಿನ ಅರ್ಥವ್ಯಾಪ್ತಿಯನ್ನು ಮರೆತಾಗ ಅದಕ್ಕೆ ಹೊಟ್ಟೆಪಾಡಿನ ಉದ್ಯೋಗವೆಂದು ಅರ್ಥವೂ ಬರುವುದರಿಂದ ಈ ಸಂದೇಹ ತೋರುವುದು ಸಹಜ. ಪ್ರತಿಯೊಬ್ಬರು ತಮ್ಮ ಜೀವನ ನಿರ್ವಹಣೆಗಾಗಿ ಉದ್ಯೋಗ ಮಾಡುವುದು ಅನಿವಾರ್ಯ, ಆದರೆ ‘ಕಾಯಕ ಎಂಬುದರ ಅರ್ಥ ಅಷ್ಟೇ ಅಲ್ಲ, ಇನ್ನೂ ವ್ಯಾಪಕವಾದದ್ದು. ತಾನು ಕೈಗೊಂಡ ಉದ್ಯೋಗ ಸಮಾಜಕ್ಕೆ ಹಾನಿಕಾರಕವಾಗಿರದೇ ಸಮಾಜದ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅದರ ಫಲ ತನಗೆ ಮಾತ್ರವಲ್ಲದೇ, ಸಮಾಜಕ್ಕೂ ದೊರೆಯಬೇಕು. ಆ ಮೂಲಕ ತನ್ನ ಸ್ವಾರ್ಥ ಅಳಿದು ವಿಶ್ವ ಶಕ್ತಿ ಹೆಚ್ಚೆಚ್ಚಾಗಿ ಅಂತರಂಗದೊಳಗೆ ಇಳಿದು ಬರಬೇಕು. ಈ ನಿರ್ಲಿಪ್ತ ಸ್ಥಿತಿಯಿಂದ ಮಾಡಿದ ಕೆಲಸ ‘ಕಾಯಕವಾಗುತ್ತದೆ’. ಈ ನಿಲುವನ್ನು ಪಡೆಯಲು ಬಹಿರಂಗದ ಆಚರಣೆಗಳು ಅವಶ್ಯಕ. ತ್ರಿವಧಿ ದಾಸೋಹಗಳು ಅವಶ್ಯಕ ಎನ್ನುತ್ತಾನೆ ಅಲ್ಲಮಪ್ರಭು.

ಮಾಡುವ ಮಾಟದಿಂದಲೇ ಬೇರೊಂದನ್ನರಿಯಬೇಕು

ಅವರವಿಂಗೆ ನೆಮ್ಮುಗೆ ಒಡಗೂಡಬೇಕು
ಬಯಲ ಭ್ರಮೆಯ ಕಳೆದು
ನಮ್ಮ ಗುಹೇಶ್ವರ ಲಿಂಗದಲ್ಲಿ
ನಿಜಪದನೈವುದು ಮಾರಯ್ಯ

ಈ ಮಾತು ಮಾರಯ್ಯನ ಮನಸ್ಸಿಗೆ ಒಪ್ಪಿಗೆಯಾಗುತ್ತದೆ. ಅದನ್ನೇ ಮನನ ಮಾಡುತ್ತಾ, ಧ್ಯಾನದಲ್ಲಿ ಮಗ್ನನಾಗಿ ತನ್ನ ಅಂದಿನ ಕಾಯಕವನ್ನೇ ಮರೆತು ಬಿಡುತ್ತಾನೆ. ಆಗ ಅಲ್ಲಿಗೆ ಬಂದ ಅವನ ಪತ್ನಿ ಲಕ್ಕಮ್ಮ ಕಾಯಕ ತಪ್ಪಬಾರದೆಂದು ಎಚ್ಚರಿಸಿ ಅವನನ್ನು ಕಳುಹಿಸಿಕೊಡುತ್ತಾಳೆ. ಮಾರಯ್ಯ ತನಗೆ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ಆಯ್ದು ಕಟ್ಟಿಕೊಂಡು ಬರುತ್ತಾನೆ. ಲಕ್ಕಮ್ಮ ಇದನ್ನು ಕಂಡು ಇಷ್ಟೊಂದು ಅಕ್ಕಿಯ ಆಸೆ ತರವಲ್ಲವೆಂದು ಸೂಚಿಸುತ್ತಾಳೆ;

ಆಸೆಯೆಂಬುದು ಅರಸಂಗಲ್ಲದೇ ಶಿವಭಕ್ತಿರಿಗುಂಟೆ ಅಯ್ಯ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ

ಈಸಕ್ಕಿ ಆಸೆಯನ್ನು ಆ ಶಿವನು ಮೆಚ್ಚಲಾರ ಎನ್ನುವ ಲಕ್ಕಮ್ಮನ ಮಾತು ಅಂದಿನ ಕಾಯಕ ತತ್ವದ ಹಿಂದಿನ ಸದುದ್ದೇಶವನ್ನು ಮನಗಾಣಿಸುತ್ತದೆ. ತನಗೆ ಅವಶ್ಯಕವಾದುದ್ದನ್ನು ಮಾತ್ರ ಪ್ರತಿಯೊಬ್ಬನು ತೆಗೆದುಕೊಂಡರೆ ಲೋಕದಲ್ಲಿ ಯಾರಿಗೂ ಯಾವ ಅವಶ್ಯಕತೆಗಳಿಗೂ ಕೊರತೆ ಇರುವುದಿಲ್ಲ. ಸೃಷ್ಟಿಕರ್ತನ ನಿಯಮವೇ ಅದು. ಮಹಾತ್ಮಾಗಾಂಧೀಜಿಯವರು "Nature produces enough for our wants from day to day; and if everybody took enough for himself and nothing more there would be no pauperism in this world. There would no man dying of starvation" ಎಂದು ಹೇಳುವ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಡಾ.ಬಿ.ಆರ್.ಅಂಬೇಡ್ಕರ್‌ರವರು "ಪ್ರತಿಯೊಬ್ಬರು ತಿನ್ನುವ ಅನ್ನ, ಬೆವರು ಸುರಿಸಿ ತನ್ನಬೇಕು" ಎನ್ನುವ ಮಾತು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ತಮ್ಮ ಅವಶ್ಯಕತೆಗೆ ಅಗತ್ಯವಾದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದು ನಿಸ್ವಾರ್ಥತೆಯಿಂದ ಬೇರೆಯವರಿಗೆ ನೀಡಿದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮರಸ್ಯ ಮೂಡುತ್ತದೆ. ವ್ಯಕ್ತಿಯ ಅಂತರAಗ ವಿಕಾಸಗೊಂಡು ಅವನ ಸಾಧನೆ ಪೂರ್ಣಗೊಳ್ಳಲು ಸಹಾಯಕವಾಗುತ್ತದೆ. ಇಂತಹ ಆದರ್ಶವನ್ನು ಲಕ್ಕಮ್ಮನಂತಹ ಒಬ್ಬ ಸ್ತ್ರೀ ಪ್ರತಿಪಾದಿಸಿರುವುದನ್ನು ನಾವು ಗಮನಿಸಬೇಕು.

ಮನು ಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವ
ಸದ್ಭಕ್ತರಿಗೆ ಎತ್ತ ನೋಡಿದೊಡತ್ತ ಲಕ್ಷ್ಮೀ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ.

ಎಂದು ಆಕೆ ಮಾರಯ್ಯನಿಗೆ ಹೇಳುತ್ತಾಳೆ. ಮತ್ತು ಅಹಂಕಾರವಳಿದು ತ್ರಿವಧ ದಾಸೋಹ ಮಾಡುವುದೇ ಮುಕ್ತಿಯ ಮಾರ್ಗವೆಂದು ಬಸವಾದಿ ಶರಣರನ್ನು ತನ್ನ ಮನೆಗೆ ದಾಸೋಹಕ್ಕಾಗಿ ಬರಮಾಡಿಕೊಂಡು ಸತ್ಕರಿಸುತ್ತಾಳೆ; ಆಗ ಬಸವಣ್ಣ;

ಮನೆ ನೋಡಾ ಬಡವರ, ಮನ ನೋಡಾ ಸಂಪನ್ನರ
ಧನ ನೋಡಾ ಬಡವರ, ಘನ ಮನ ಸಂಪನ್ನರ
ಕೂಡಲ ಸಂಗನ ಶರಣರ ಕರುಳಿಲ್ಲದ ಕಲಿಗಳು
ಅರಿಗೆ ಉಪಮಿಸಬಹುದು.

ಎಂದು ಹೊಗಳುತ್ತಾನೆ. ಕರುಳಿಲ್ಲದ ಕಲಿಗಳು ಎಂಬ ಮಾತಿನಲ್ಲಿ ಈ ಶರಣರ ದಂಪತಿಗಳು ಸತ್ಯ ನಿಷ್ಠೂರರು. ಅಸತ್ಯ ಅನ್ಯಾಯದ ಬಗೆಗೆ ಯಾವುದೇ ದಯೆಯನ್ನು ತೋರದ ನಿಷ್ಠೂರವಾದಿಗಳು ಎಂಬ ಅರ್ಥವು ಸತ್ಯದಾರಿಯಲ್ಲಿ ಕಾಯಕ ನಡೆಸುವ ಕಠೋರ ನಿಷ್ಠೆಯನ್ನು ಸೂಚಿಸುತ್ತದೆ. ದುರಾಸೆಯಿಂದ,

ದುರ್ಮಾರ್ಗದಿಂದ ಸಂಪಾದಿಸಿದ ಹಣ, ದುಡಿಯದೆ, ಬೆವರು ಸುರಿಸದೇ ಗಳಿಸಿದ ಹಣ ಶಿವನಿಗೆ ಸಲ್ಲುವುದಿಲ್ಲವೆಂದು ನುಲಿಯ ಚಂದಯ್ಯ ಸಾರುತ್ತಾನೆ.

ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೇ
ದುರಾಶೆಯಿಂದ ಬಂದುದು ಅನರ್ಪಿತ
ಇದು ಕಾರಣ ಸತ್ಯ ಶುದ್ಧ ಕಾಯಕ ನಿತ್ಯ ದ್ರವ್ಯವಾದರೆ

ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ ಎನ್ನುವಲ್ಲಿ ಸತ್ಯ ಶುದ್ಧ ಕಾಯಕದ ಹೆಚ್ಚುಗಾರಿಕೆ ವಿಶದವಾಗುತ್ತದೆ.

ಕಾಯಕವೆಂದು ಕಾಯವ ಬಳಲಿಸದೆ,
ತನು ಕರಗದೆ ಮನ ನೋಯದೆ,
ಬೇಡಿ ಕಾಡಿ ಮಾಡುವುದು ದಾಸೋಹವೇ?

ಎಂದು ಶಿವಲೆಂಕ ಮಂಚಣ್ಣ ಪ್ರಶ್ನಿಸುತ್ತಾನೆ. ತಾನು ಮಾಡುವ ಕಾಯಕವೆಲ್ಲಾ ಪರಸೇವೆಗೆ ಮೀಸಲು ಎನ್ನುವ ಬಸವಣ್ಣ ಹೀಗೆ ಹೇಳುತ್ತಾನೆ.

ನಾನು ಆರಂಭವ ಮಾಡುವೆನೆಯ್ಯ ಗುರುಪೂಜೆಗೆಂದು;
ನಾನು ಬೆವಹಾರವ ಮಾಡುವೆನೆಯ್ಯ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನೆಯ್ಯ ಜಂಗಮ ದಾಸೋಹಕ್ಕೆಂದು

ಈ ರೀತಿಯಾಗಿ ಕಾಯಕ ಮತ್ತು ದಾಸೋಹದ ಮಹತ್ವವನ್ನು ಶಿವಶರಣರು ತಮ್ಮ ಅನುಭಾವದ ಪರಕ್ಷಾಷ್ಠೆಯ ಮೂಲಕ ತತ್ವ ಉಪದೇಶಗಳನ್ನು ಮನುಕುಲಕ್ಕೆ ಮನುಮುಟ್ಟುವಂತೆ ಸರಳ ಸಹಜ ಭಾಷೆಯಲ್ಲಿ ತಮ್ಮದೇ ಉದಾಹರಣೆಗಳನ್ನು ಕೊಟ್ಟು ವಿವೇಕವನ್ನು ಹೇಳುತ್ತಾ ಸಮಾಜದ ಡೊಂಕನ್ನು ತಿದ್ದುವ ನಿಟ್ಟಿನಲ್ಲಿ ಶ್ರಮಿಸಿದರು.

**ಕೊನೆಯ ಮಾತು:**

ಇಂದಿನ ಕೈಗಾರಿಕ ಯುಗದ ಅನೇಕ ಸಾಮಾಜಿಕ ಕ್ಷೋಭೆಗಳಿಗೆ ರಾಸೆಯೇ ಕಾರಣವಾಗಿದ್ದು, ಬೆವರು ಸುರಿಸದೇ ಸುಲಭವಾಗಿ ಹಣ ಮಾಡುವ ದುರ್ಮಾರ್ಗಗಳ ಹುಡುಕಾಟದಲ್ಲೇ ನಿರತರಾಗಿರುವವರ ಮಧ್ಯೆ ಕಾಯಕ ಮತ್ತು ದಾಸೋಹದ ನಿಜ ಅರ್ಥದಲ್ಲಿ ಶ್ರಮ ಮತ್ತು ಹಂಚಿ ತಿನ್ನುವ ಬೆಲೆಯನ್ನು ವಿಭೂತಿಯಾಗಿ ಪರಿಭಾವಿಸಿದ ಶರಣರ ಸಾಧನೆ ನಿಜಕ್ಕೂ ಅಸಾಮಾನ್ಯವಾದುದ್ದು. ಸರ್ವ ಕಾಲಕ್ಕೂ ಪ್ರಸ್ತುತವಾದುದ್ದು.

ಇವತ್ತಿನ ಜಾಗತೀಕರಣ ಯುಗದಲ್ಲಿ ರಾಜಕಾರಣಿಗಳಾದಿಯಾಗಿ ಪ್ರತಿಯೊಬ್ಬರೂ ಶರಣರ ವಚನಗಳನ್ನು ಅರಿತು ನಡೆದರೆ ಪೂರ್ಣದೃಷ್ಟಿಯ ಆದರ್ಶ ಸಮಾಜ ಕಾಣಲು ಸಾಧ್ಯ. ನಮಗೆ ಆದರ್ಶವಾಗಿ ಕಾಣುತ್ತಿರುವ ಕಾಗೆಗಳ ಬದುಕು, ಇರುವೆಗಳ ಬದುಕು, ಜೇನುಹುಳುಗಳ ಬದುಕು ನಮಗೆ ದಾರಿದೀಪವಾಗಿಲ್ಲವೇ? ಇವುಗಳ ಬದುಕನ್ನು ಅರಿತು ನಿಸ್ವಾರ್ಥ ಬದುಕನ್ನು ಕಟ್ಟಿಕೊಳ್ಳುವ ಹಂಬಲದ ಆಶಯ ನಮ್ಮದಾಗಬೇಕಾಗಿದೆ.

ಮುಂದುವರೆದು, ವಚನ ಸಾಹಿತ್ಯದಲ್ಲಿ ಬರುವ ಕಾಯಕ ಮತ್ತು ದಾಸೋಹಗಳು 12ನೇ ಶತಮಾನದ ಕರ್ನಾಟಕದಲ್ಲಿ ಹೊರಹೊಮ್ಮಿದ ವಿಶಿಷ್ಟ, ಪ್ರಾಯೋಗಿಕ ಮತ್ತು ಆಧ್ಯಾತ್ಮಿಕ ಸಮಾಜವಾದವನ್ನು ಪ್ರತಿನಿಧಿಸುತ್ತವೆ ಎಂಬುದು ವಿದ್ವಾಂಸರ ಒಮ್ಮತದ ಅಭಿಪ್ರಾಯವಾಗಿದೆ. ಇದು ವ್ಯಕ್ತಿಯ ಕೆಲಸದ ಸಮರ್ಪಣೆ ಮತ್ತು ಸಮುದಾಯದ ಸಮಾನತೆಯ ಬದ್ಧತೆಯ ಮೇಲೆ ಕೇಂದ್ರೀಕರಿಸುತ್ತದೆ.

**ಪರಾಮರ್ಶನ ಗ್ರಂಥಗಳು:**

1. ವಚನ ಸಾಹಿತ್ಯ, ಸಂಪಟ–೫, ಡಾ.ಎಂ.ಚಿದಾನ0ದಮೂರ್ತಿ, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೨೦೦೦.
2. ಶಿವಶರಣೆಯರ ವಚನ ಸಂಪುಟ-೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

3. ಓ.ಎಲ್.ನಾಗಭೂಷಣಸ್ವಾಮಿ; ವಚನ ಸಾವಿರ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೪.
4. ಅರಿವಿನ ಆಂದೋಲನ-ಶ್ರೀ ಡಿ. ಎಂ. ಧನ್ನೂರ್-ವಚನಕಮ್ಮಟ ಪರೀಕ್ಷೆ,ಬಸವ ಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ-೧೯೯೯.
5. ನಿರ್ವಚನ-ಸಂ.ಪ್ರೊ||ಚ0ದ್ರಶೇಖರ ವಸ್ತ್ರದ - ವಚನಕಮ್ಮಟ ಪರೀಕ್ಷೆ, ಬಸವ ಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ-೨೦೦೧.
6. ಉಲಿವ ಮಠ-ಡಾ.ಶಾಂತರಸ ಹೆಂಬೆರಾಳು-ಪ್ರಸಾರ0ಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,-೨೦೦೭.